ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ,
ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು.

ಸಂ:ಸ.ಕಾ.ಅ(ಉ)/ಪಿಆರ್/ /20-21 ದಿನಾಂಕ:07-11-2020

## ದಿನಾಂಕ:07-11-2020ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:07-11-2020ರ ಶನಿವಾರ ಅಪರಾಹ್ನ 2.30 ಘಂಟೆಗೆ ವಾರ್ಡ್ ನಂ:184 ಉತ್ತರಹಳ್ಳಿ, ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:**

| ಕ್ರಮಸಂಖ್ಯೆ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು ವಾಡ್ ನೋಡಲ್ ಅಧಿಕಾರಿ | ಹಾಜರಿದ್ದವರು |
| 2 | ಶ್ರೀ ಎಂ ಜಿ ಕುಮಾರ್ | ಕಾರ್ಯದರ್ಶಿಗಳು | ಹಾಜರಿದ್ದವರು |
| 3 | ಶ್ರೀ ಹೆಚ್ ದೇವರಾಜ್ | ಸಹ ಕಂದಾಯ ಅಧಿಕಾರಿ | ಹಾಜರಿದ್ದವರು |
| 4 | ಶ್ರೀ ಶಶಿಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದವರು |
| 5 | ಶ್ರೀ ರಿಶೀಕ್ ರಾಕೇಶ್ | ಅಭಿಜ್ಞಾನ ಪೌಂಡೇಶನ್ ಸ್ಥಳೀಯ ಸಂಘ | ಹಾಜರಿದ್ದವರು |
| 6 | ಶ್ರೀಮತಿ ರಾಜೇಶ್ ಸಿಂಗ್ ಆರ್ | ಪ್ರಾಥಮಿಕ ಆರೋಗ್ಯ ಕೇಂದ್ರ | ಹಾಜರಿದ್ದವರು |
| 7 | ಡಾ|| ನಿಖಿಲ್ | ಪ್ರಾಥಮಿಕ ಆರೋಗ್ಯ ಕೇಂದ್ರ | ಹಾಜರಿದ್ದವರು |
| 8 | ಶ್ರೀಮತಿ ಸುಜಾತ | ಕಲ್ಯಾಣ ಇಲಾಖೆ | ಹಾಜರಿದ್ದವರು |
| 9 | ಶ್ರೀ ಎನ್ ಕೃಷ್ಣಮೂರ್ತಿ | ಮೌಲ್ಯಮಾಪಕರು | ಹಾಜರಿದ್ದವರು |
| 10 | ಶ್ರೀಮತಿ ಸುಷ್ಮಾ ಎಸ್ | ಕೆರೆಗಳು, ಬಿಬಿಎಂಪಿ | ಹಾಜರಿದ್ದವರು |
| 11 | ಶ್ರೀಮತಿ ವರಲಕ್ಷ್ಮೀ ಬಾಲಾಜಿ | ಮಂತ್ರಿ,ಟ್ರ್ಯಾಕ್‌ವಿಲ್,ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 12 | ಶ್ರೀ ಎ.ಪಿ ಕಾಮತ್ | ಮಂತ್ರಿ, ಟ್ರ್ಯಾಕ್‌ವಿಲ್,ಆರ್.ಡಬ್ಲ್ಯೂ.ಎ | ಹಾಜರಿದ್ದವರು |

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

| | | | |
|---|---|---|---|
| 13 | ಶ್ರೀ ಕೆ.ಪಿ ಪ್ರಸಾದ್ | ಮಂತ್ರಿ, ಟ್ರ್ಯಾಕ್‌ವಿಲ್.ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 14 | ಶ್ರೀರಾಮ್ ಶ್ರೀನಿವಾಸ್ | ಮಂತ್ರಿ, ಟ್ರ್ಯಾಕ್‌ವಿಲ್.ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 15 | ಶ್ರೀ ದತ್ತಾತ್ರೇಯ | ಜಯನಗರ, ಹೌಸಿಂಗ್ ಸೊಸೈಟಿ ಲೇಔಟ್ ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 16 | ಶ್ರೀ ಬಿ ಎಸ್ ರಂಗನಾಥ್ ಪ್ರಸಾದ್ | ಜಯನಗರ, ಹೌಸಿಂಗ್ ಸೊಸೈಟಿ ಲೇಔಟ್ ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 17 | ಶ್ರೀ ಅನಿಲ್ | ಜಯನಗರ, ಹೌಸಿಂಗ್ ಸೊಸೈಟಿ ಲೇಔಟ್ ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 18 | ಶ್ರೀ ಸಂದೀಪ್ | ಅರಣ್ಯ ವಿಭಾಗ | ಹಾಜರಿದ್ದವರು |
| 19 | ಶ್ರೀ ಶಿವಶಂಕರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 20 | ಶ್ರೀ ಶಿವಶಂಕರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 21 | ಶ್ರೀ ಎಸ್ ರಾಘವೇಂದ್ರ | ಎ.ಜಿ ಎಸ್ ಲೇಔಟ್ ಅಧ್ಯಕ್ಷರು | ಹಾಜರಿದ್ದವರು |
| 22 | ಶ್ರೀ ಆನಂದ್ ಮೂರ್ತಿ | ಪಾಂ.ಸ್ಪ್ರಿಂಗ್‌ಲೇಔಟ್. ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 23 | ಶ್ರೀ ನಾಗೇಶ್ವರ್ ರಾವ್ | ಪಾಂ.ಸ್ಪ್ರಿಂಗ್ ಲೇಔಟ್. ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 24 | ಶ್ರೀ ನಾಗರಾಜು | ಪಾಂ ಗ್ರೋವ್ ಎನ್ ಕ್ಲೇ ಲೇಔಟ್ | ಹಾಜರಿದ್ದವರು |
| 25 | ಶ್ರೀ ಗುರು ಶಂಕರ್ ಎನ್ | ಸಿಂಗಾಪುರ, ಗಾರ್ಡನ್ | ಹಾಜರಿದ್ದವರು |
| 26 | ಶ್ರೀ ಶ್ರೀನಿವಾಸ್ ಎಸ್ | ಗುತ್ತಿಗೆದಾರರು | ಹಾಜರಿದ್ದವರು |

**ಸಭೆಯ ನಡುವಳಿಗಳು:-**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಸಭೆಯನ್ನು ಉದ್ದೇಶಿಸಿ ನೋಡಲ್ ಅಧಿಕಾರಿಗಳು ಕೋವಿಡ್-19 ಸಾಂಕ್ರಾಮಿಕ ರೋಗ ಹಿನ್ನೆಲೆ ಸಭೆಯಲ್ಲಿ ಉಪಸ್ಥಿತರಿಂದ ಆರೋಗ್ಯಾಧಿಕಾರಿಗಳು ಹಾಗೂ ವೈದ್ಯರನ್ನು ಉದ್ದೇಶಿಸಿ ಕೋವಿಡ್-19, ಟೆಸ್ಟಿಂಗ್ ವಾರ್ಡ್ ಮಟ್ಟದಲ್ಲಿ ಪ್ರತಿದಿನ ನಡೆಸಲಾಗುತ್ತಿದ್ದು, ಒಟ್ಟಾರೆ ವಾರ್ಡ್ ಮಟ್ಟದಲ್ಲಿ ಏಳು ಕೋವಿಡ್ ಟೆಸ್ಟಿಂಗ್ ಕ್ಯಾಂಪ್‌ಗಳನ್ನು ಹಾಕಲಾಗಿದ್ದು ಒಂದು ಮೊಬೈಲ್ ಕ್ಯಾಂಪ್ ಕಾರ್ಯನಿರ್ವಹಿಸುತ್ತಿದ್ದು ಕೋವಿಡ್ ಟೆಸ್ಟಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿರುವುದಾಗಿ ಹಿರಿಯ ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ. ಮುಂದುವರೆದಂತೆ ವಾರ್ಡ್ ಮಟ್ಟದಲ್ಲಿಯ ಅಪಾರ್ಟ್‌ಮೆಂಟ್ಸ್ ಸಂಕೀರ್ಣಗಳಲ್ಲಿ ಕ್ಯಾಂಪ್‌ಗಳನ್ನು ಹಾಕಿ ಕೋವಿಡ್-19 ಟೆಸ್ಟಿಂಗ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಆದರೆ ಟೆಸ್ಟಿಂಗ್ ಮಾಡಿಸಿಕೊಳ್ಳಲು ಬರುವ ಸಾರ್ವಜನಿಕರ ಸಂಖ್ಯೆ ಕಡಿಮೆಯಿರುವುದಾಗಿ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ. ಸಭೆಯಲ್ಲಿ ಉಪಸ್ಥಿತರಿರುವ ಆರ್.ಡಬ್ಲ್ಯೂ. ಎ ಸದಸ್ಯರೊಂದಿಗೆ ಸಮನ್ವಯದ ಮೂಲಕ ಟೆಸ್ಟಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು. ವಾರ್ಡ್ ಮಟ್ಟದಲ್ಲಿನ ಕಂದಾಯ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿ ಟೆಸ್ಟಿಂಗ್ ಮಾಡಿಸಲು ಜನರನ್ನು ಕರೆತರಲು ಸೂಚಿಸಲಾಗಿದ್ದು,

7/11

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

**ಕಾಮಗಾರಿ ಇಲಾಖೆ:-**

ಕಾರ್ಯದರ್ಶಿಗಳಾದ ಶ್ರೀ ಕುಮಾರ್‌ರವರು ಸಭೆಯಲ್ಲಿ ಉಪಸ್ಥಿತರಿದ್ದು, ಬಿಡಿಎ ಲೇಔಟ್‌ಗೆ ಸಂಬಂಧಿಸಿದಂತೆ 5ನೇ ಹಂತದಲ್ಲಿ ಮಳೆನೀರು ಕಾಲುವೆ ಕಟ್ಟಿಹೋಗಿ ನೀರು ಹೊರಬರುತ್ತಿದ್ದು, ರಸ್ತೆಯಲ್ಲಿ ತುಂಬುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಈ ವಿಷಯವಾಗಿ ಸೂಕ್ತ ಕ್ರಮತೆಗೆದುಕೊಳ್ಳುವುದಾಗಿ ಸೂಚಿಸಲಾಯಿತು.

ಎ.ಜಿ.ಎಸ್. ಲೇಔಟ್ ಆಪೋಸಿಟ್ ವಿದ್ಯಾ ಗಣಪತಿ ಬಸ್ ರೂಟ್ ಫಾಟ್ ಹೋಲ್ ವಿಚಾರವಾಗಿ ಪರಿಶೀಲಿಸಿ ಕ್ರಮವಹಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಕೆ.ಪಿ.ಟಿ.ಸಿ.ಎಲ್ ಸಬ್‌ಸ್ಟೇಷನ್ ಅರೇಹಳ್ಳಿ ಹತ್ತಿರ (ಮೈತ್ರಿ ಅಧಿತಿ ಅಪಾರ್ಟ್‌ಮೆಂಟ್) ಹತ್ತಿರ ಮಳೆನೀರು ಹೊರಹರಿಯುತ್ತಿದ್ದು, ಈ ವಿಷಯವಾಗಿ ಮಳೆ ನೀರುಗಾಲುವೆ ವ್ಯವಸ್ಥಿತವಾಗಿ ಇರುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಹಾಯಕ ಅಭಿಯಂತತರಿಗೆ ಸೂಚಿಸಲಾಯಿತು.

ಅಯ್ಯಪ್ಪ ಲೇಔಟ್ ನಾಗರಕಟ್ಟೆ ಹತ್ತಿರ ಜಕ್ಕಮ್ಮ ಲೇಔಟ್ ಹತ್ತಿರ ರೋಡ್ ಡ್ರೈನೇಜ್ ಹಾಗೂ ಪಾದಕ ಮಂದಿರ ಜಿ.ಹೆಚ್.ಬಿ.ಸಿ.ಎಸ್ 1ನೇ ಹಂತ ಜಾಗದಲ್ಲಿ ಟಾರ್ ರೋಡ್ ವ್ಯವಸ್ಥೆ 20 ವರ್ಷಗಳಿಂದ ಆಗಿರುವುದಿಲ್ಲವಾಗಿ ದೂರಿದ್ದು, ಈ ವಿಷಯವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಮುಂದುವರೆದಂತೆ ಕನಕಪುರ ರಸ್ತೆಯಿಂದ ಗುಬ್ಬಲಾಳ (ಸರ್ಕಲ್ ಮಂತ್ರಿ ಟ್ರಾಕ್ ವಿಲ್) ರೋಡ್ ರೆಸ್ಟೋರೆಷನ್ ಕಾರ್ಯ ಸಂಬಂಧಿಸಿದಂತೆ ಮೇಜರ್ ರೋಡ್ ವಿಭಾಗದವರು ಕ್ರಮವಹಿಸಬೇಕಾಗಿ ಸಹಾಯಕ ಅಭಿಯಂತರರು ತಿಳಿಸಿದ್ದು, ಸದರಿ ರಸ್ತೆ ಕಾಮಗಾರಿ ಸಂಬಂಧಿಸಿದಂತೆ ಮೇಜರ್ ರೋಡ್ ವಿಭಾಗದವರಿಗೆ ತಿಳಿಸಲು ಸೂಚಿಸಲಾಯಿತು.

**ಸಾರ್ವಜನಿಕ ಶೌಚಾಲಯ:-**

- ಸಾರ್ವಜನಿಕ ಶೌಚಾಲಯ ವ್ಯವಸ್ಥೆ ಮಾಡುವಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಲಾಯಿತು.
- ಸಾರ್ವಜನಿಕ ಶೌಚಾಲಯಕ್ಕೆ ಸಂಬಂಧಿಸಿದಂತೆ ಎಜಿಎಸ್ ಲಾಮ ಬಸ್ ಸ್ಟಾಪ್ ಹತ್ತಿರ ಸಾರ್ವಜನಿಕ ಶೌಚಾಲಯ ಕಲ್ಪಿಸಲು ಕ್ರಮ ಕೋರಲಾಯಿತು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ**

ಪ್ಲಾಂ ಸ್ಪ್ರಿಂಗ್ ಲೇಔಟ್ ಸಂಬಂಧಿಸಿದಂತೆ ಸ್ಯಾನಿಟರಿ ವಿಚಾರವಾಗಿ ಕಾಮಗಾರಿ ಪೂರ್ಣಗೊಳ್ಳದೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವುದಾಗಿ ತಿಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

7/11
ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

**ಘನತ್ಯಾಜ್ಯ ನಿರ್ವಹಣೆ ಬಗ್ಗೆ:-**

- ವಾರ್ಡ್ ವ್ಯಾಪ್ತಿಯ ಆರೋಗ್ಯ ಅಧಿಕಾರಿಗಳು, ಗುತ್ತಿಗೆದಾರರು ಸೂಪರ್ ವೈಸರ್ ಉಪಸ್ಥಿತರಿದ್ದು, ಘನತ್ಯಾಜ್ಯ ವಿಷಯವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿದಿನ ಪರಿವೀಕ್ಷಿಸಿ, ಅದನ್ನು ನಿರ್ಮೂಲನೆ ಮಾಡುವಲ್ಲಿ ಕ್ರಮವಹಿಸಲು ಸೂಚಿಸಲಾಯಿತು.
- ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಆರೋಗ್ಯಾಧಿಕಾರಿಗಳು ಆರ್. ಡಬ್ಲೂ ಎ ಸದಸ್ಯರೊಡನೆ ಸಮಾಲೋಚಿಸಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಸಭೆಯಲ್ಲಿ ಸೂಚಿಸಲಾಯಿತು.
- ಗುಬ್ಬಲಾಳ ಪ್ರದೇಶದಲ್ಲಿ ಕನಕಪುರ ರಸ್ತೆ ಮತ್ತು ಸುಬ್ರಹ್ಮಣ್ಯ ಪುರ ನಡುವಿನ ಪ್ರಮುಖ ಕೋಡಿಯಾಗಿರುವ ಗುಬ್ಬಲಾಳ ಮುಖ್ಯರಸ್ತೆ ಘನತ್ಯಾಜ್ಯ ಸಮಸ್ಯೆಯಿದ್ದು, ಸುತ್ತಮುತ್ತಲಿನ ಜನ ಕಸವನ್ನು ವಿವೇಚನವಿಲ್ಲದೇ ಎಸೆಯುತ್ತಿರುವುದು ಹಾಗೂ ಅದನ್ನು ಸುಡಲಾಗುತ್ತಿರುವುದರ ಬಗ್ಗೆ ಆರ್.ಡಬ್ಲೂ.ಎ ರವರು ಸಭೆಯಲ್ಲಿ ತಿಳಿಸಿದ್ದು, ಈ ವಿಷಯವಾಗಿ ಉಪಸ್ಥಿತರಿದ್ದ ಹಿರಿಯ ಆರೋಗ್ಯಾಧಿಕಾರಿಗಳು ಗಮನಹರಿಸಿರುವುದಾಗಿ ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿ ನೋಡಲ್ ಅಧಿಕಾರಿಗಳು ಸೂಚಿಸಿದರು.
- ವಾರ್ಡ್ ಮಟ್ಟದಲ್ಲಿ ಪ್ರತಿ ಮನೆಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಪ್ರತ್ಯೇಕವಾಗಿ ಸಂಗ್ರಹಣೆ ಆಗುತ್ತಿರುವ ಬಗ್ಗೆ ಹಾಗೂ ಆಟೋ ಟಿಪ್ಪರ್/ತಳ್ಳುವ ಗಾಡಿ ಮನೆಮನೆಗೆ ತಲುಪುತ್ತೀರುವ ಬಗ್ಗೆ ಆರೋಗ್ಯಾಧಿಕಾರಿಗಳು ಹಾಗೂ ಸೂಪರ್ ವೈಸರ್‌ಗಳು ಗಮನಹರಿಸಲು ಕ್ರಮ ತೆಗೆದುಕೊಳ್ಳಲು ನೂಡಲ್ ಅಧಿಕಾರಿಗಳು ಸೂಚಿಸಿದರು.
- ಮುಂದುವರೆದಂತೆ ಗುಬ್ಬಲಾಳ ಮುಖ್ಯ ರಸ್ತೆ ಪ್ರದೇಶದಲ್ಲಿ, ಹಾಗೂ ಪಾಂ ಗ್ರೇವ್ ಎನ್ಕ್ಲೈ ಪ್ರದೇಶದಲ್ಲಿ ಡೋರ್ ಟು ಡೋರ್ ಕಲೆಕ್ಷನ್ ಆಗುತ್ತಿರುವ ಬಗ್ಗೆ ಪರಿಶೀಲಿಸಿ ಕ್ರಮತೆಗೆದುಕೊಳ್ಳಲು ಆರೋಗ್ಯಾಧಿಕಾರಿ ಸೂಚಿಸಲಾಯಿತು.

**ಕಂದಾಯ:-**

ವಾರ್ಡ್ ವ್ಯಾಪ್ತಿಯ ಕಂದಾಯ ವಸೂಲಾತಿ ಬಗ್ಗೆ ಉಪಸ್ಥಿತರಿದ್ದ ಸಹಾಯಕ ಕಂದಾಯ ಅಧಿಕಾರಿಗಳಾದ ಶ್ರೀ ದೇವರಾಜ್ ಈ ವರ್ಷದ ಒಟ್ಟು ಕಂದಾಯ ಬೇಡಿಕೆ 458600000 ಗಳಾಗಿದ್ದು ಒಟ್ಟು ವಸೂಲಾತಿ 263300000 ಗಳಾಗಿದ್ದು ಬಾಕಿ ಮೊತ್ತ 193900000 ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಎಲ್ಲಾ ಢೀ ಫಾಲ್ಟರ್ಸ್ ರವರಿಗೆ ನಿಯಮಾನುಸಾರ ನೋಟೀಸ್‌ಗಳು ಜಾರಿಯಾಗಿರುವ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು.

**ವಿದ್ಯುತ್:-**

ಸಭೆಯಲ್ಲಿ ಉಪಸ್ಥಿತರಿದ್ದ ಆರ್.ಡಬ್ಲೂ.ಎ ರವರು ಗುಬ್ಬಲಾಳ ಮುಖ್ಯರಸ್ತೆ, ಮಂತ್ರಿ ಟ್ರ್ಯಾಕ್ವಿಲ್ ಹತ್ತಿರ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಸರಿಪಡಿಸುವ ಅವಶ್ಯಕತೆ ಇರುವುದಾಗಿ ತಿಳಿಸಿದರು. ಈ ವಿಷಯವಾಗಿ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಉಪಸ್ಥಿತರಿದ್ದ ವಿದ್ಯುತ್ ವಿಭಾಗದವರೆಗೆ ತಿಳಿಸಲಾಯಿತು. ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

7/11
ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

2ನೇ ಹಂತ ಜೆ.ಹೆಚ್.ಬಿ.ಸಿ.ಎಸ್. ಪ್ರೈವೇಟ್ ಲೇಔಟ್ ರೋಹನ್ ಆಕೃತಿ ಹತ್ತಿರ ಡ್ರೈನೇಜ್ ಕಟ್ಟಿಕೊಳ್ಳುತ್ತಿರುವ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

ಮೇಲ್ಕಂಡಂತೆ ಈ ಎಲ್ಲಾ ಇಲಾಖೆಗಳ ವಿಷಯವಾಗಿ ದೂರುಗಳು ಇದ್ದಲ್ಲಿ, ತಿಳಿಸಲು ಸ್ಥಳೀಯ ಸಂಘ ಸಂಸ್ಥೆಗಳಿಗೆ ಕೇಳಲಾಗಿದ್ದು, ಪ್ರಸ್ತಾಪ ದೂರುಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಂದ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ನೋಡಲ್ ಅಧಿಕಾರಿಗಳು ನಿರ್ದೇಶಿಸಿದ್ದು ವರದಿಗಳನ್ನು ಮುಂದಿನ ಸಭೆಯಲ್ಲಿ ನೀಡಲು ನಿರ್ದೇಶಿದರು.

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ

ವಾರ್ಡ್ ನಂ:184 ಉತ್ತರಹಳ್ಳಿ

7/11

ಅಧ್ಯಕ್ಷರು
ನೋಡಲ್ ಅಧಿಕಾರಿ
ವಾರ್ಡ್ ನಂ:184 ಉತ್ತರಹಳ್ಳಿ

ಪ್ರತಿಯನ್ನು:-

1. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
5. ಮಾನ್ಯ ಮುಖ್ಯ ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್/ಕೆರೆ) ರವರಿಗೆ ಸೂಕ್ತ ಕ್ರಮಕ್ಕಾಗಿ
7. ವೈದ್ಯಕೀಯ ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ.
8. ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಅವಗಾಹನೆಗೆ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
10. ಕಾರ್ಯಪಾಲಕ ಅಭಿಯಂತರರು , ಮೇಜರ್ ರೋಡ್ಸ್ ರವರಿಗೆ ಸೂಕ್ತ ಕ್ರಮಕ್ಕಾಗಿ
11. ಮಾನ್ಯ ಅರಣ್ಯ ಸಂರಕ್ಷಣಾ ಅಧಿಕಾರಿಗಳು ರವರಿಗೆ.
12. ಸಹಾಯಕ ಕಂದಾಯ ಅಧಿಕಾರಿ (ಉತ್ತರಹಳ್ಳಿ) ರವರಿಗೆ ಸೂಕ್ತ ಕ್ರಮಕ್ಕಾಗಿ
13. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
14. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ
15. ಕಛೇರಿ ಪ್ರತಿ.

Scanned with CamScanner